## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** M/s Sherisha Agriculture Private. Limited ರವರು ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ 44.50 ಮೆ.ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಹಂಚಿಕೆ ಆದೇಶ ನೀಡುವ ಬಗ್ಗೆ.

**ಓದಲಾಗಿದೆ:**
1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರ ಏಕ ಕಡತ ಸಂಖ್ಯೆ: 1546 –S
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ದಿನಾಂಕ: 25.11.2017 ರ ಹಂಚಿಕೆ ಸಮಿತಿ ಸಭೆ ನಡವಳಿಗಳು.

ಸಂ. 4686
ದಿನಾಂಕ 22/12/17

* * *

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರ ಏಕ ಕಡತ ಪದ್ಧತಿಯಡಿಯಲ್ಲಿ M/s Sherisha Agriculture Private. Limited ರವರು ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಲಕ್ಷ್ಮೇಶ್ವರ್, ಮಂಜಲಾಪುರ ಮತ್ತು ಅದೇರಕಟ್ಟಿ ಗ್ರಾಮಗಳಲ್ಲಿ 44.50 ಮೆ.ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಸ್ಥಾಪಿಸಲು 44.50 ಮೆ.ವ್ಯಾ ಸಾಮರ್ಥ್ಯಕ್ಕೆ ನಿಗದಿತ ಶುಲ್ಕವನ್ನು ಪಾವತಿಸಿ ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಿದ್ದು, ಸದರಿ ಸ್ಥಳವು ಈಗಾಗಲೇ M/s Vish Wind Infrastructure LLP ರವರಿಗೆ ಹಂಚಿಕೆಯಾಗಿ ರದ್ದುಗೊಂಡಿರುವ ಸ್ಥಳದಲ್ಲಿರುತ್ತದೆ. M/s Sherisha Agriculture Private. Limited ಕಂಪನಿಯ ನೆಟ್‌ವರ್ತ್ ದಿನಾಂಕ: 31.03.2017 ರ ಅಂತ್ಯಕ್ಕೆ ರೂ.31.36 ಕೋಟಿಗಳೆಂದು ಚಾರ್ಟೆಡ್ ಅಂಕೌಂಟೆಂಟ್ ದೃಢೀಕರಣ ಪತ್ರ ಹಾಗೂ ಬ್ಯಾಲೆನ್ಸ್ ಶೀಟ್‌ಗಳನ್ನು ಸಲ್ಲಿಸಿರುವುದಾಗಿ ಹಾಗೂ ಸದರಿ ಕಂಪನಿಯ Registrar of Companies, Ministry of Corporate Affairs, Government of India, Chennai ಇವರಲ್ಲಿ ದಿನಾಂಕ: 18.12.2015 ರಂದು CIN ಸಂಖ್ಯೆ U01400TN2015PTC103377 ರನ್ವಯ ನೋಂದಣಿಯಾಗಿರುತ್ತದೆ. M/s Sherisha Agriculture Private. Limited ರವರು ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ 44.50 ಮೆ.ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಸ್ಥಾಪಿಸಲು ಯೋಜನೆಗೆ ಸಂಬಂಧಿಸಿದ ತಾಂತ್ರಿಕ ವಿವರಗಳು, ಸ್ಥಳದ ಮಾಹಿತಿ, ಅಕ್ಷಾಂಶ ಮತ್ತು ರೇಖಾಂಶ ಇನ್ನಿತರೆ ವಿವರಗಳೊಂದಿಗೆ ಈ ಕೆಳಕಂಡ ಶೆಡ್ಯೂಲ್‌ನಲ್ಲಿರುವಂತೆ ಹಂಚಿಕೆ ಮಾಡಲು ವ್ಯವಸ್ಥಾಪಕ ನಿರ್ದೇಶಕರು, ಕ್ರೆಡಲ್ ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

Geographical area description for 44.5 MW capacity wind power project

| Sl. No | Topo sheet No | Proposed capacity in MW | Near by villages of the proposed area and district | Geographical area description of the project |
|---|---|---|---|---|
| 1 | 48 M /8 | 44.50 MW (22 Nos x 2000 kw) | Lakshmeshwar, Manjlapura and Aderkatti Village of Shiratti Taluk, Gadag District. | The proposed area is in plain land. The area is surrounded by points A, B, C, D and are held in the following Geographical co-ordinates as:<br>Point A: Lat: 15°0'0''N, Long: 75°28'18.80''E<br>Point B: Lat: 15°10'36.26''N, Long: 75°28'18.8''E<br>Point C: Lat: 15°10'36.26''N, Long: 75°30'0''E<br>Point D: Lat: 15°05'0''N, Long: 75°30'0''E<br>Peaks: 611, 649, 622, 627, 629, 636, 656 and 619m AMSL. |
| | **Total** | **44.5 MW** | | |

2899
26.12.17

...2)

ಮೇಲೆ ಓದಲಾದ ಕ್ರಮ ಸಂಖ್ಯೆ: (2) ದಿನಾಂಕ: 25.11.2017 ರಂದು ನಡೆದ ಹಂಚಿಕೆ ಸಮಿತಿ ಸಭೆಯಲ್ಲಿ M/s Sherisha Agriculture Private. Limited ರವರು ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಲಕ್ಷ್ಮೇಶ್ವರ್, ಮಂಜಲಾಪುರ ಮತ್ತು ಅದೇರಕಟ್ಟಿ ಗ್ರಾಮಗಳಲ್ಲಿ 44.50 ಮೆ.ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಘಟಕ ಸ್ಥಾಪಿಸುವ ಪ್ರಸ್ತಾವನೆಗೆ ಸಮಿತಿಯು ಸದರಿ ಕಂಪನಿಯವರು ಸ್ಥಾಪಿಸಲು ಉದ್ದೇಶಿಸಿರುವ ಸ್ಥಳವು ಖಾಸಗಿ ಜಮೀನಾಗಿದ್ದು, ಸದರಿ ಸ್ಥಳದಲ್ಲಿ ಪವನ ವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ 44.50 ಮೆ.ವ್ಯಾ ಸಾಮರ್ಥ್ಯಕ್ಕೆ ಹಂಚಿಕೆ ನೀಡಲು ಸಮಿತಿಯು ಸರ್ವಾನುಮತದಿಂದ ಶಿಫಾರಸ್ಸು ಮಾಡಿರುತ್ತದೆ.

ಸದರಿ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ : ಇಎನ್ 485 ಎನ್‌ಸಿಇ 2017, ಬೆಂಗಳೂರು, ದಿನಾಂಕ: 21.12.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, M/s Sherisha Agriculture Private. Limited ರವರು ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಲಕ್ಷ್ಮೇಶ್ವರ್, ಮಂಜಲಾಪುರ ಮತ್ತು ಅದೇರಕಟ್ಟಿ ಗ್ರಾಮಗಳಲ್ಲಿ 44.50 ಮೆ.ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಈ ಕೆಳಗಿನ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹಾಗೂ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಹಂಚಿಕೆ ಮಾಡಿ ಆದೇಶಿಸಲಾಗಿದೆ.

Geographical area description for 44.5 MW capacity wind power project

| Sl. No | Topo sheet No | Proposed capacity in MW | Near by villages of the proposed area and district | Geographical area description of the project |
|---|---|---|---|---|
| 1 | 48 M /8 | 44.50 MW (22 Nos x 2000 kw) | Lakshmeshwar, Manjlapura and Aderkatti Village of Shiratti Taluk, Gadag District. | The proposed area is in plain land. The area is surrounded by points A, B, C, D and are held in the following Geographical co-ordinates as:<br>Point A: Lat: 15°0'0''N, Long: 75°28'18.80''E<br>Point B: Lat: 15°10'36.26''N, Long: 75°28'18.8''E<br>Point C: Lat: 15°10'36.26''N, Long: 75°30'0''E<br>Point D: Lat: 15°05'0''N, Long: 75°30'0''E<br>Peaks: 611, 649, 622, 627, 629, 636, 656 and 619m AMSL. |
| | **Total** | **44.5 MW** | | |

**ಷರತ್ತುಗಳು:-**

1. ಈ ಆದೇಶ ಹೊರಡಿಸಿದ ದಿನಾಂಕದಿಂದ 45 ದಿನಗಳ ಒಳಗಾಗಿ ಸರ್ಕಾರದ ಆದೇಶ ಸಂಖ್ಯೆ : ಇಎನ್ 435 ಎನ್‌ಸಿಇ 2011, ದಿನಾಂಕ :06.1.2012 ರನ್ವಯ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.
2. ಅಭಿವೃದ್ಧಿದಾರರು ಈ ಯೋಜನೆಯನ್ನು ಸರ್ಕಾರದ ಆದೇಶ ಸಂಖ್ಯೆ: ಇಎನ್ 354 ಎನ್‌ಸಿಇ 2008 ದಿನಾಂಕ: 19.01.2010 ಹಾಗೂ ತಿದ್ದುಪಡಿ ಆದೇಶ ಸಂಖ್ಯೆ: ಇಎನ್ 07 ಎನ್‌ಸಿಇ 2011, ದಿನಾಂಕ: 18.07.2011 ರಲ್ಲಿ ನಿಗದಿಪಡಿರುವ ಅವಧಿಯೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು.
3. ಅಭಿವೃದ್ಧಿದಾರರು ತಾಂತ್ರಿಕ ಅವಶ್ಯಕತೆ ಮತ್ತು ಹೆಚ್ಚಿನ ವಿದ್ಯುತ್ ಉತ್ಪಾದನೆಯನ್ನು ಸೇಫ್‌ನಕ್ಷೆ ಮತ್ತು ವಿಂಡ್ ಫಾರ್ಮನ ಲೇಔಟ್‌ನ ಬದಲಾವಣೆಗನುಗುಣವಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಶಿಫಾರಸ್ಸಿನಂತೆ ಇದೆ ಎಂಬುದನ್ನು ಖಾತರಿ ಪಡಿಸಬೇಕು.
4. ಮೈಲುಗಲ್ಲುಗಳನ್ನು ತೋರಿಸುವ ಪರ್ಟ್ ನಕ್ಷೆಯನ್ನು ತಯಾರಿಸಿ ಮೇಲುಸ್ತುವಾರಿಗಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸಲ್ಲಿಸಬೇಕು.
5. ಎಲ್ಲೆಲ್ಲಿ ಶಾಸನಬದ್ಧ ಅನುಮೋದನೆ ಅವಶ್ಯಕತೆಯಿದೆಯೋ ಅಂದರೆ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ / ಕಂದಾಯ ಇಲಾಖೆಗಳ ಮತ್ತು ಇತರ ಸಂಬಂಧಿತ ಇಲಾಖೆಗಳಿಂದ ಅನುಮೋದನೆಯನ್ನು ಹಂಚಿಕೆದಾರರು ಪಡೆದುಕೊಳ್ಳತಕ್ಕದ್ದು. ಅಭಿವೃದ್ಧಿದಾರರು ಈ ಯೋಜನೆಯನ್ನು ಖಾಸಗಿ ಜಮೀನಿನಲ್ಲಿ ಅನುಷ್ಠಾನಗೊಳಿಸುತ್ತಿದ್ದು, ಖಾಸಗಿ ಜಮೀನಿನ ಮಾಲೀಕರಿಂದ ಒಪ್ಪಿಗೆ ಪತ್ರ ಪಡೆಯತಕ್ಕದ್ದು.

...3)